ಸಾಕ್ಷಿಯನ್ನು ದಿಃ 19.11.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಪಾಟೀ ಸವಾಲುಃ 6 ನೇ ಎದುರುದಾರರ ಪರ ವಕೀಲರಿಂದಃ**

1. ಶಿವಗಂಗಾ ಬಿಲ್ಡರ್ಸ್ ಮತ್ತು ಡೆವೆಲಪರ್ಸ್‌ರಲ್ಲಿ ನಾನು ಒಬ್ಬ ಪಾಲುದಾರನಿರುತ್ತೇನೆ. ಈ ಸಂಸ್ಥೆ 2016 ರಲ್ಲಿ ನೋಂದಣಿಯಾಗಿರುತ್ತದೆ. 5 ನೇ ಎದುರುದಾರರು ಸಹ ಅ ಸಂಸ್ಥೆಯಲ್ಲಿ ಒಬ್ಬ ಪಾಲುದಾರರಿರುತ್ತಾರೆ. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೇಘಲಾಪುರ ಗ್ರಾಮದ ಸರ್ವೆ ನಂಬರ್ 32/1 ರಲ್ಲಿ 7 ಎಕರೆ 5 ಗುಂಟೆ ಜಮೀನು ಇದೆ. ಅದೇ ರೀತಿ ಸರ್ವೆ ನಂಬರ್ 33/1 ರಲ್ಲಿ 4 ಎಕರೆ ಜಮೀನು ಇದೆ. ಈ ಎರಡು ಜಮೀನಿನ ಮೂಲ ಮಾಲೀಕರು ಅಪ್ಪಾಜಿಗೌಡ. ಸದರಿ ಅಪ್ಪಾಜಿಗೌಡ 6 ನೇ ಎದುರುದಾರರ ತಂದೆ. ಅಪ್ಪಾಜಿಗೌಡ ಬದುಕಿದ್ದ ಕಾಲದಲ್ಲಿ ಅ ಜಮೀನುಗಳ ಖಾತೆ ಮತ್ತು ಸ್ವಾಧೀನ ಅವರಿಗಿತ್ತು.

2. ದಿಃ21.01.2008 ರಲ್ಲಿ ಸದರಿ ಅಪ್ಪಾಜಿಗೌಡ 6 ನೇ ಎದುರುದಾರರಿಗೆ ಸರ್ವೆ ನಂಬರ್ 32/1 ರಲ್ಲಿ 7 ಎಕರೆ 5 ಗುಂಟೆ ಜಮೀನನ್ನು ದಾನಮಾಡಿಕೊಟ್ಟಿರುತ್ತಾರೆ. ಅ ಪ್ರಕಾರ 6 ನೇ ಎದುರುದಾರರು ಈ ಜಮೀನಿನ ಮಾಲೀಕರಾಗಿರುತ್ತಾರೆ. ಅಪ್ಪಾಜಿಗೌಡರವರಿಗೆ 6 ನೇ ಎದುರುದಾರರು ಸೇರಿ ಒಟ್ಟು 7 ಜನ ಮಕ್ಕಳು. ಅವರಲ್ಲಿ ಎರಡು ಮೂರು ಜನರ ಹೆಸರು ಗೊತ್ತು. ದಿಃ 09.11.2017 ರಲ್ಲಿ ಅವರೆಲ್ಲರೂ ಸೇರಿ ಸರ್ವೆ ನಂಬರ್ 32/1 ರಲ್ಲಿ 7 ಎಕರೆ 5 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ 6 ನೇ ಎದುರುದಾರರಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದೇ ರೀತಿ 6 ನೇ ಎದುರುದಾರರ ತಮ್ಮ ಗಜೇಂದ್ರ ಸಹ ಸದರಿ ಜಮೀನಿಗೆ ಸಂಬಂಧಪಟ್ಟಂತೆ 6 ನೇ ಎದುರುದಾರರಿಗೆ ದಿಃ 27.07.2020 ರಂದು ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ.

3. ಈ ದಾಖಲೆಗಳ ಆಧಾರದ ಮೇಲೆ ಸರ್ವೆ ನಂಬರ್ 32/1 ಮತ್ತು 33/1 ರ ಜಮೀನಿಗೆ 6 ನೇ ಎದುರುದಾರರೇ ಮಾಲೀಕರು ಮತ್ತು ಹಕ್ಕುದಾರರಾಗಿರುತ್ತಾರೆ. ಈ ದಾಖಲೆಗಳನ್ನೆಲ್ಲಾ ಪರಿಶೀಲನೆ ಮಾಡಿ ಸರ್ವೆ ನಂಬರ್

32/1 ಕ್ಕೆ ಸಂಬಂಧಪಟ್ಟಂತೆ 6 ನೇ ಎದುರುದಾರರ ಕಡೆಯಿಂದ ದಿಃ 27.10.2017 ರಂದು ಜಂಟಿ ಅಭಿವೃದ್ಧಿ ಕಾರಾರನ್ನು ನಾವು ಮಾಡಿಕೊಂಡಿರುತ್ತೇವೆ.ಈ ಜಂಟಿ ಅಭಿವೃದ್ಧಿ ಕಾರಾರಿನ ಪ್ರಕಾರ ಅನ್ಯಕ್ರಾಂತವಾದ 2 ವರ್ಷದೊಳಗೆ ಪೂರ ಅಭಿವೃದ್ಧಿ ಮಾಡುತ್ತೇವೆ ಎಂಬುದಾಗಿ ನಿಬಂಧನೆ ಇದೆ. ಈ ಕಾರಾರು ಆದ ಮೇಲೆ ಅನ್ಯಕ್ರಾಂತ ಮಾಡಿಸಲು ಡಿ.ಸಿಯವರಿಗೆ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಅ ಅರ್ಜಿಯ ಮೇಲೆ ಆದೇಶವಾಗಿರುತ್ತದೆ. ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಹಾಗಾಗಿ ನಾವು ಸದರಿ ಕರಾರಿನ ಪ್ರಕಾರವಾಗಿ ನಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅ ಕರಾರನ್ನು ನಾವು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

4. ದಿಃ 04.06.2020 ರಂದು ರಾಷ್ಟ್ರೀಯ ಹೆದ್ದಾರೆ ಸಂಸ್ಥೆಯವರು ರಸ್ತೆ ನಿರ್ಮಾಣ ಮಾಡಲು ಸರ್ವೆ ನಂಬರ್ 32/1 ಹಾಗೂ 33/1 ರ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿರುತ್ತಾರೆ. ಭೂ ಸ್ವಾಧೀನವಾಗುವ ಕಾಲಕ್ಕೆ ಅ ಜಮೀನು ವ್ಯವಸಾಯದ ಜಮೀನಾಗಿತ್ತು ಎನ್ನುವುದಕ್ಕೆ ಅನ್ಯಕ್ರಾಂತವಾಗಿತ್ತು ಎಂಬುದಾಗಿ ಸಾಕ್ಷಿ ಹೇಳುತ್ತಾರೆ. ದಾಖಲೆಗಳನ್ನು ಪರಿಶೀಲನೆ ಮಾಡಿ ರಾಷ್ಟ್ರೀಯ ಹೆದ್ದಾರೆ ಸಂಸ್ಥೆಯವರು ಭೂ ಸ್ವಾಧೀನಪಡಿಸಿಕೊಂಡ ಜಮೀನಿಗೆ 6 ನೇ ಎದುರುದಾರರಿಗೆ ಪರಿಹಾರವನ್ನು ಘೋಷಣೆ ಮಾಡಿರುತ್ತಾರೆ. ಹಾಗಾಗಿ ಭೂ ಸ್ವಾಧೀನವಾದ ಸರ್ವೆ ನಂಬರ್ 32/1 ಹಾಗೂ 33/1 ರ ಜಮೀನಿನ ಪರಿಹಾರವನ್ನು ಪಡೆದುಕೊಳ್ಳಲು 6 ನೇ ಎದುರುದಾರರು ಹಕ್ಕುಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ.

5. ಸರ್ವೆ ನಂಬರ್ 33/1 ರ ಜಮೀನಿಗೆ ಸಂಬಂಧಪಟ್ಟಂತೆ ನಾವು ಯಾವುದೇ ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಂಡಿರುವುದಿಲ್ಲ. ಜಂಟಿ ಕರಾರು ಆದ ದಿನಾಂಕದಿಂದ ಇಲ್ಲಿಯವರೆಗೆ ಸರ್ವೆ ನಂಬರ್ 32/1 ರ ಜಮೀನಿಗೆ ಸಂಬಂಧಪಟ್ಟಂತೆ ಕರಾರಿನ ಪ್ರಕಾರ ನಾವು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಅ ಕರಾರು ಊರ್ಜಿತವಲ್ಲ ಎಂದರೆ ಸರಿಯಲ್ಲ. ಹಾಗಾಗಿ ಅ ಕರಾರಿನ ಆಧಾರದ ಮೇಲೆ ಸರ್ವೆ ನಂಬರ್ 32/1

ರ ಜಮೀನಿಗೆ ಸಂಬಂಧಪಟ್ಟಂತೆ ನಮಗೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾವು ಯಾವುದೇ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ–** ಇರುವುದಿಲ್ಲ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು